# ಸ್ಟಾರ್ ಮೇಕರ್ ಆಗಬೇಕು

**ವಿನುತಾ ನಾಗರಾಜ್**
ಕಲರ್ಸ್ ಸೂಪರ್‌ನ 'ಸಿಲ್ಲಿಲಲ್ಲಿ'ಯ ಸೂಜಿ



◆ **ಬಾಲ್ಯದಲ್ಲೇ ಬಣ್ಣದ ನಂಟು ಇತ್ತಾ?**

ಹುಟ್ಟಿದ್ದು ತಾಯಿ ತವರು ಮಳವಳ್ಳಿಯಲ್ಲಿ. ಆದರೆ ನನ್ನೂರು ಬೆಂಗಳೂರು. ತಂದೆ ನಾಗರಾಜ್, ಅಮ್ಮ ಶಶಿಕಲಾ. ಬಿಎಸ್ಸಿ ಕಂಪ್ಯೂಟರ್ ಸೈನ್ಸ್ ಓದಿದೆ. ಕಾಲೇಜು ದಿನಗಳಲ್ಲಿ ನಾಟಕ– ಡಾನ್ಸ್ ಎಂದು ಯಾವತ್ತೂ ಯೋಚಿಸಿದವಳಲ್ಲ. ಶಾಲಾ ದಿನಗಳಲ್ಲಿ ಮಾತ್ರ ತುಂಬ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೆ. ಆಗ ಒಮ್ಮೆ 'ಸಿಲ್ಲಿಲಲ್ಲಿ' ಕಥೆಯ ವಸ್ತುವನ್ನೇ ಇಟ್ಟುಕೊಂಡು ರೂಪಕವೊಂದನ್ನು ಮಾಡಿದ್ದೆವು. ಆಗ ನಾನು ಡುಮ್ಮಕಿದ್ದೆ ಎಂದು ನನಗೆ ವಿಶಾಲು ಪಾತ್ರ ಸಿಕ್ಕಿತ್ತು. ಅದು ಬಿಟ್ಟರೆ ಅಂತಹ ಯಾವ ಕಲಾ ಕಾರ್ಯ ಮಾಡಲಿಲ್ಲ. ಡಾನ್ಸ್ ಮತ್ತು ಹಾಡನ್ನು ಕಲಿತಿದ್ದೇನೆ. ಡಿಗ್ರಿ ಮುಗಿದ ಮೇಲೆ ಎನ್‌ಜಿಒ ಒಂದರಲ್ಲಿ ವಿದ್ಯಾರ್ಥಿಗಳಿಗೆ ಸ್ವಚ್ಛತಾ ತರಬೇತುದಾರಳಾಗಿ ಕೆಲಸಕ್ಕೆ ಸೇರಿದೆ. ಸರ್ಕಾರಿ ಶಾಲಾ ಮಕ್ಕಳಿಗೆ ಸ್ವಚ್ಛತೆ ಮಹತ್ವ ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಬಗ್ಗೆ ಹೇಳಿಕೊಡುವುದು ನನ್ನ ಕೆಲಸ. ಒಂದೆರಡು ವರ್ಷದ ಅವಧಿಯಲ್ಲಿ 30–40 ಶಾಲೆಗಳಲ್ಲಿ ಅಂಗನವಾಡಿಯಿಂದ ಪ್ರೌಢ ಶಾಲಾ ಮಕ್ಕಳಿಗೆ ತರಬೇತಿ ನೀಡಿದ್ದೇನೆ.

◆ **ಅಭಿನಯದ ಒಲುಮೆ ಮೂಡಿದ್ದು ಹೇಗೆ?**

ಎನ್‌ಜಿಒದಲ್ಲಿ ಬಹುಸ್ತರದಲ್ಲಿ ಕಾರ್ಯನಿರ್ವಹಿಸಬೇಕಿತ್ತು. ಸಾಮಾಜಿಕ ಜನಜಾಗೃತಿಗಾಗಿ ಬೀದಿ ನಾಟಕಗಳ ತಂಡ ಕರೆಸುತ್ತಿದ್ದೆವು. ಒಮ್ಮೆ ಬೀದಿನಾಟಕ ಮಾಡಿಸಿದೆವು. ಆಗ ನಾಟಕದ ಬಗ್ಗೆ ಮಾತನಾಡಿದ್ದನ್ನು ಕಂಡು ನಿರ್ದೇಶಕ ಚಕ್ರಪಾಣಿ ನೀವು ಚೆನ್ನಾಗಿ ಮಾತನಾಡುತ್ತೀರಿ ರಂಗಭೂಮಿಗೆ ಏಕೆ ಬರಬಾರದು? ನಿಮ್ಮ ಭಾಷಾ ಶುದ್ಧತೆ ಚೆನ್ನಾಗಿದೆ ಎಂದರು. ನಾನಾಗ ಬರವಣಿಗೆ ಇಷ್ಟ– ತಂತ್ರಜ್ಞೆಯಾಗಬೇಕು ಎಂಬ ಆಶೆ ಇದೆ. ತೆರೆಯ ಮೇಲೆ ಪ್ರದರ್ಶನಗೊಳ್ಳುವುದಕ್ಕಿಂತ ತೆರೆಯ ಮರೆಯಲ್ಲಿ ಪ್ರದರ್ಶಿಸುವಂತೆ ಮಾಡುವುದು ಇಷ್ಟ ಎಂದಿದ್ದೆ. ತಂತ್ರಜ್ಞಳಾಗಬೇಕೆಂದವಳು ಆಕಸ್ಮಿಕವಾಗಿ ಬಣ್ಣವನ್ನು ಹಚ್ಚುವಂತೆ ಆಗಿದೆ.

ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ರಂಗಭೂಮಿ ಕಾರ್ಯಾಗಾರವನ್ನು ಏರ್ಪಡಿಸಿತ್ತು. ಚಕ್ರಪಾಣಿಯವರು ಭಾಗವಹಿಸುವಂತೆ ಹೇಳಿದರು. ಒಂದು ವಾರ ಬಂದು ನೋಡು ಇಷ್ಟ ಆದರೆ ಮುಂದುವರಿಸು ಎಂದು ಹೇಳಿದರು. ಅದನ್ನು ಪೂರೈಸಿದ ಮೇಲೆ ರಂಗಭೂಮಿ ಆಕರ್ಷಣೆ ಆಯಿತು. ನಂತರ ಸ್ವಯಂ ನಾನೇ ಕೆಲಸ ಬಿಡಲೇಬೇಕು ಎಂದು ಒತ್ತಡ ಹಾಕಿಕೊಂಡು ಕೆಲಸ ಬಿಟ್ಟೆ. ರಾಜ್‌ಗುರು ಹೊಸಕೋಟೆ ಅವರ 'ಸಾತ್ವಿಕ ರಂಗ ಪಯಣ' ತಂಡದಲ್ಲಿ ತೊಡಗಿದೆ. ಎರಡು ತಿಂಗಳು ಐದಾರು ನಾಟಕ ಮಾಡಿದೆ. ದೂರದರ್ಶನ ಚಂದನದ 'ಸೂಪರ್ ಅತ್ತೆ ಪಾಪರ್ ಅಳಿಯ' ಹಾಸ್ಯ ಧಾರಾವಾಹಿಗೆ ಆಡಿಷನ್ ಬಂತು. ಭರವಸೆ ಇರಲಿಲ್ಲ ಆದರೂ ಆಡಿಷನ್‌ಗೆ ಹೋದೆ ಅವಕಾಶ ಸಿಕ್ಕಿತು. ಅಲ್ಲಿ ನನ್ನ ಅತ್ತೆ ಪಾತ್ರವನ್ನು ನಿರ್ವಹಿಸುತ್ತಿದ್ದ ದಮಯಂತಿ ನಾಗರಾಜ್ ಅವರೇ ಮಾತನಾಡಿಸಿ ನನ್ನ ನಟನೆಯನ್ನು ಪ್ರಶಂಸಿಸಿದರು. ಅಲ್ಲದೆ 'ಸಿಲ್ಲಿಲಲ್ಲಿ' ಮತ್ತೆ ಆರಂಭವಾಗುತ್ತಿದೆ, ಹೋಗುತ್ತೀಯಾ ಅಂದರು. ನೋಡೋಣ ಅಂದೆ. ಅವತ್ತು ಸಂಜೆಯೇ ಎಕ್ಸಿಕ್ಯೂಟಿವ್ ಎಡಿಟರ್ ವಿಜಯಕುಮಾರ್ ಸೂಜಿ ಪಾತ್ರಕ್ಕೆ ಆಡಿಷನ್ ನಡೀತಾ ಇದೆ ಬನ್ನಿ ಅಂದರು. ಆಡಿಷನ್ ನೀಡಿ ಬಂದ 20 ದಿನಗಳ ನಂತರ ಕಾಲ್ ಮಾಡಿ ಸಿಲ್ಲಿ ಪಾತ್ರಕ್ಕೆ ಆಯ್ಕೆ ಮಾಡಿದ್ದಾಗಿ ತಿಳಿಸಿದರು. ಆಗ ನನಗೆ ಶಾಕ್ ಆಯಿತು. ಸೂಜಿಗೆ ಅಂತ ಹೋಗಿದ್ದೆ ಸಿಲ್ಲಿ ಆಯ್ತಲ್ಲ ಎನ್ನುವ ಸಣ್ಣ ಕಸಿವಿಸಿ ಇತ್ತು. ಚಿತ್ರೀಕರಣದ ಹೊತ್ತಿಗೆ ನನಗೆ ಸೂಜಿ ಪಾತ್ರವೇ ಬಂತು ಒಟ್ಟಾರೆ ಖುಷಿಯಾಗಿದ್ದೇನೆ.

◆ **ನಿಮಗೆ ಹೊರಗಡೆ ರೇಗಿಸುತ್ತಾರ?**

ಹೊರಗೆ ಮಾತ್ರ ಅಲ್ಲ, ಶೂಟಿಂಗ್ ಮನೆಯಲ್ಲೂ ವಿಶೇಷವಾಗಿ ನೋಡುತ್ತಾರೆ. ಸೂಜಿ ಅಂದರೆ ಚಿಕ್ಕ ಹುಡುಗಿ ಪೆದ್ದು ಪದ್ದಾಗಿ ಇದ್ದಾಳೆ ಎನ್ನುವ ಕಾರಣಕ್ಕೆ. ನನ್ನನ್ನು ಚಿಕ್ಕ ಹುಡುಗಿಯಂತೆಯೇ ಎಲ್ಲರೂ ನೋಡುತ್ತಾರೆ. ಮಕ್ಕಳು ನನ್ನ ಪಾತ್ರವನ್ನು ತುಂಬ ಇಷ್ಟಪಡುತ್ತಾರೆ. ನಮ್ಮ ಅಮ್ಮನಿಗೆ ಕೆಲವರು ಆಂಟಿ ಸೂಜಿ ಹೇಗಿದ್ದಾಳೆ ಎಂದು ಕೇಳುತ್ತಾರಂತೆ. ಸೆಟ್‌ಗೆ ಭೇಟಿ ನೀಡುವ ಮಕ್ಕಳೂ ಫ್ರೆಂಡ್ ರೀತಿ ಅಂದುಕೊಂಡೇ ಮಾತನಾಡಿಸುತ್ತಾರೆ. ಬಂದ ತಕ್ಷಣ ಹಾಯ್ ಸೂಜಿ ಮನೆ ತೋರಿಸು ಬಾ ಎಂದು ಕರೆಯುತ್ತಾರೆ.

◆ **ನಿಮ್ಮ ಬರವಣಿಗೆಯ ಸ್ವರೂಪ ಹೇಗಿರುತ್ತೆ?**

ನನಗೆ ಸ್ತ್ರೀ ಸಂವೇದನೆಗಳನ್ನು ದಾಖಲಿಸಬೇಕು ಎಂಬ ಆಲೋಚನೆ ಇದೆ. ಮಹಿಳೆಯ ತೊಂದರೆ ಮತ್ತು ಆಕೆಗೆ ಇರುವ ಸವಾಲುಗಳನ್ನು ನನ್ನ ಬರಹ ಬಿಂಬಿಸಬೇಕು. ಹೆಚ್ಚಾಗಿ ನಾನು ಜನರ ಜೊತೆ ಬೆರೆಯುವುದಿಲ್ಲ. ಅದನ್ನು ಕೆಲವರು ತಪ್ಪಾಗಿ ತಿಳಿಯುವ ಸಾಧ್ಯತೆ ಇದೆ. ನನ್ನ ಸ್ವಭಾವವೇ ಹಾಗಿದೆ. ಚಿಕ್ಕ ವಯಸ್ಸಿನಿಂದಲೇ ಒಬ್ಬಳೇ ಇದ್ದು ಅಭ್ಯಾಸ. ನನಗೆ ಸ್ನೇಹಿತರು ಕೂಡ ತುಂಬ ಕಡಿಮೆ. ಏಕಾಂಗಿತನದ ಕಥೆಗಳು ಇಷ್ಟ ಆಗುತ್ತವೆ. ಕೌಟುಂಬಿಕ ವಾತಾವರಣಗಳಿಗಿಂತ ಒಂಟಿತನದಲ್ಲಿನ ಬಗ್ಗೆಯೇ ಬರೆಯಬೇಕು. ನನಗೆ ನಟಿ ಆಗುವುದಕ್ಕಿಂತ ತಾಂತ್ರಿಕ ಕೆಲಸ ಮಾಡುವ ಬಗ್ಗೆ ಒಲವು ಹೆಚ್ಚಿದೆ. ನಿರ್ದೇಶಕಿ ಆಗಬೇಕು. ವೇದಿಕೆಯಲ್ಲಿ ನನ್ನನ್ನು ನಾನು ಪ್ರದರ್ಶಿಸಿಕೊಳ್ಳುವುದಕ್ಕಿಂತ, ವೇದಿಕೆ ಹಿಂದೆ ಇದ್ದು ಹುರಿದುಂಬಿಸಿ ಸ್ಟಾರ್ ಮೇಕರ್ ಆಗುತ್ತೇನೆ.

■ **ರಾಘವೇಂದ್ರ ಕೆ.**